**ಓ.ಎಸ್. ನಂಃ 324/2022**

**ಪಿ.ಡಬ್ಲ್ಯೂಃ 1**

**ದಿನಾಂಕ 20.02.2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿಯ ಪರಃ ಶ್ರೀ ಸಿ.ಡಿ.ಎಮ್ ವಕೀಲರಿಂದಃ**

1. ನನ್ನ ತಂದೆಯ ತಂದೆ ಅಂದರೆ ನನ್ನ ತಾತನ ಹೆಸರು ನಾರಾಯಣಗೌಡ ಅಂತ ಇರುತ್ತದೆ. ದಾವಾ ಆಸ್ತಿ ನಮ್ಮ ಪಿತ್ರಾರ್ಜಿತ ಆಸ್ತಿಯಾಗಿರುತ್ತದೆ. ಸರ್ವೆ ನಂಬರ್ 104/2 ರ ಪೂರ್ತಿ ವಿಸ್ತೀರ್ಣ 4 ಎಕರೆ 4 ಗುಂಟೆ ಇರುತ್ತದೆ. ಸರ್ವೆ ನಂಬರ್ 104/2 ರ 4 ಎಕರೆ 4 ಗುಂಟೆ ಜಮೀನು ನನ್ನ ತಾತನಾದ ನಾರಾಯಣಗೌಡರವರಿಗೆ ಸೇರಿದ ಆಸ್ತಿಯಾಗಿತ್ತು. ನನ್ನ ತಾತನಾದ ನಾರಾಯಣಗೌಡರವರಿಗೆ ನನ್ನ ತಂದೆಯಾದ ಜನಾರ್ಧನ ಮತ್ತು 1 ನೇ ವಾದಿ ಅಂತ ಇಬ್ಬರೇ ಮಕ್ಕಳಿರುತ್ತಾರೆ.

2. ನನ್ನ ತಂದೆಯಾದ ಜನಾರ್ಧನ ಮತ್ತು 1 ನೇ ವಾದಿಯ ಮಧ್ಯೆ ಪಾಲುವಿಭಜನೆಯಾಗಿರುತ್ತದೆ ಎಂದರೆ ಸರಿ. ನನ್ನ ತಂದೆ ಮತ್ತು 1 ನೇ ವಾದಿಯ ಮಧ್ಯೆ ಪಾಲುವಿಭಜನೆಯು 1981-82 ನೇ ಇಸವಿಯಲ್ಲಿ ಆಗಿರುತ್ತದೆ. ಸದರಿ ಪಾಲು ವಿಭಜನೆಯಾದ ನಂತರದಲ್ಲಿ 1 ನೇ ವಾದಿ ಮತ್ತು ನನ್ನ ತಂದೆ ಅವರವರ ಕುಟುಂಬ ಸಮೇತ ಬೇರೆ ಬೇರೆಯಾಗಿ ವಾಸಿಸುತ್ತಿದ್ದರು ಎಂದರೆ ಸರಿ. 1981-82 ರಲ್ಲಿ ಆದ ಪಾಲುವಿಭಜನೆಯ ಪ್ರಕಾರ ನನ್ನ ತಂದೆಯ ಹಿಸ್ಸೆಗೆ ಬಂದ ಆಸ್ತಿಗಳು ನನ್ನ ತಂದೆಯ ಹೆಸರಿಗೆ ಮತ್ತು 1 ನೇ ವಾದಿಯ ಹಿಸ್ಸೆಗೆ ಬಂದ ಆಸ್ತಿಗಳು ಅವರ ಹೆಸರಿಗೆ ವರ್ಗಾವಣೆಯಾಗಿರುತ್ತದೆ ಎಂದರೆ ಸರಿ.

3. ಸರ್ವೆ ನಂಬರ್ 104/2 ರಲ್ಲಿ ಒಂದು ಕಾಲು ಎಕರೆ ಜಮೀನು 1 ನೇ ವಾದಿಯ ಹಿಸ್ಸೆಗೆ ಹೋಗಿರುತ್ತದೆ. ನನ್ನ ತಂದೆಯ ಹಿಸ್ಸೆಗೆ ಸರ್ವೆ ನಂಬರ್ 104/2 ರಲ್ಲಿ 1 ಎಕರೆ 1 ಗುಂಟೆ ಜಮೀನು ಬಂದಿರುತ್ತದೆ. 1981-82 ರಲ್ಲಿ 1 ನೇ ವಾದಿ ಮತ್ತು ನನ್ನ ತಂದೆಯ ಮಧ್ಯೆ ಆದ ಪಾಲುವಿಭಜನೆಯು ಲಿಖಿತವಾಗಿ ಆಗಿರುತ್ತದೆಯೋ ಅಥವಾ ಮೌಖಿಕವಾಗಿ ಆಗಿರುತ್ತದೆಯೋ ನನಗೆ ಗೊತ್ತಿಲ್ಲ. ಸದರಿ ಪಾಲು ವಿಭಜನೆಯಲ್ಲಿ ಸರ್ವೆ ನಂಬರ್ 104/2 ರಲ್ಲಿ 1 ನೇ ವಾದಿಯ ಹಿಸ್ಸೆಗೆ ಬಂದಿದ್ದ ಒಂದು ಕಾಲು ಎಕರೆ

ಜಮೀನು ಹಾಗೂ ನನ್ನ ತಂದೆಯ ಹಿಸ್ಸೆಗೆ ಬಂದ 1 ಎಕರೆ 1 ಗುಂಟೆ ಜಮೀನು ಈ ದಾವೆಯ ಆಸ್ತಿಯಾಗಿರುವುದಿಲ್ಲ.

4. ನಾನು ಈ ದಾವೆಯನ್ನು ಸರ್ವೆ ನಂಬರ್ 104/2 ರ 10 ಗುಂಟೆ ಜಮೀನಿನ ಸಂಬಂದ ಹೂಡಿರುತ್ತೇನೆ ಎಂದರೆ ಸರಿ. ಪ್ರತಿವಾದಿಯು ಕಾಮಾಕ್ಷಮ್ಮ ಹಾಗೂ ಕಾಮಾಕ್ಷಮ್ಮ ರವರ ಮಕ್ಕಳಿಂದ ಖರೀದಿಸಿದ್ದ 1 ಎಕರೆ 32 ಗುಂಟೆ ಜಮೀನಿನ ಪೈಕಿ 10 ಗುಂಟೆ ಜಮೀನಿನ ಸಂಬಂದ ನಾವು ಈ ದಾವೆಯನ್ನು ಹೂಡಿರುತ್ತೇವೆ ಎಂದರೆ ಸರಿಯಲ್ಲ. ಪ್ರತಿವಾದಿಯು ಕಾಮಾಕ್ಷಮ್ಮರವರಿಂದ ಸರ್ವೆ ನಂಬರ್ 104/2 ರಲ್ಲಿ ಖರೀದಿಸಿದ್ದ 1 ಎಕರೆ 32 ಗುಂಟೆ ಜಮೀನಿನ ಮೇಲೆ ನಮಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನನ್ನ ಅಜ್ಜಿಯಾದ ದೇವಮ್ಮರವರ ಹೆಸರಿಗೆ ಇದ್ದ 25 ಗುಂಟೆ ಜಮೀನಿನಲ್ಲಿ 10 ಗುಂಟೆ ಜಮೀನಿನ ಸಂಬಂದ ಈ ದಾವೆಯನ್ನು ಹೂಡಿರುತ್ತೇವೆ ಎಂದು ನುಡಿದಿರುತ್ತಾರೆ.

5. ದಿಃ 09.06.1977 ರ ಪಂಚಾಯಿತಿ ಪಾಲು ಪಾರಿಕತ್ ನ ವಿಷಯ ನಾನು ವಾದಪತ್ರದಲ್ಲಿ ಹೇಳಿರುವುದಿಲ್ಲ ಎಂದರೆ ಸಾಕ್ಷಿಯು ಸದರಿ ದಾಖಲೆಯನ್ನು ನಾನು ವಕೀಲರಿಗೆ ಕೊಟ್ಟಿರುತ್ತೇನೆ ಎಂದು ನುಡಿದಿರುತ್ತಾರೆ. ದಿಃ 09.06.1977 ರಲ್ಲಿ ಆದ ಪಂಚಾಯಿತಿ ಪಾಲುಪಾರಿಕತ್ ನಲ್ಲಿ ಆಸ್ತಿಗಳೆಲ್ಲವೂ ಸಹ 1 ನೇ ವಾದಿ, ನನ್ನ ತಂದೆ ಮತ್ತು ನನ್ನ ಅಜ್ಜಿಯಾದ ದೇವಮ್ಮರವರ ಮದ್ಯೆ 3 ಹಿಸ್ಸೆಯಾಗಿ ವಿಂಗಡಣೆ ಆಗಿರುತ್ತದೆ ಎಂದರೆ ಸರಿ. ಸದರಿ ಪಾಲುಪಾರಿಕತ್ ನಲ್ಲಿ ಸರ್ವೆ ನಂಬರ್ 104/2 ರಲ್ಲಿ ಯಾರ ಹಿಸ್ಸೆಗೆ ಎಷ್ಟು ಜಮೀನು ಹೋಗಿರುತ್ತದೆ ಎಂದು ನನಗೆ ಹೇಳಲು ಬರುವುದಿಲ್ಲ ಎಂದರೆ ಸರಿ.

**ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು, ಕೆ.ಆರ್.ನಗರ.**